ಅಲ್ಲಿಗೆ ಹೋಗುವೆಯಂತೆ; ಈಗ ಇಲ್ಲಿ ನೋಡು... ಗೋಡೆಯ ಮೇಲೆ ಏನೇನು ಇದೆ... ಅಂತಾ ಒಮ್ಮೆ ನೋಡು...' ಎಂದು ರಮಿಸುತ್ತಾ, ಆತನನ್ನು ಆಸ್ಪತ್ರೆಯ ಕಾರಿಡಾರ್‌ನಲ್ಲಿ ಆತನನ್ನು ಕುಮುದಳ ಜತೆಗೆ ಬಿಟ್ಟು, ತಾವು ವೈದ್ಯರ ಸಹಾಯಕ ತೋರಿಸಿದ್ದ ಸ್ಪೆಷಲ್ ವಿಸಿಟರ್ಸ್ ಕೊಠಡಿಯತ್ತ ನಡೆದಿದ್ದರು.

ರಾಮಯ್ಯಾಳ್ವರಿಗೆ ಆ ಆಸ್ಪತ್ರೆಯ ಕಾರಿಡಾರ್ ಹೊರಗಿನಿಂದ ನೋಡಲು ಮಾಮೂಲು ಕಾರಿಡಾರ್‌ನಂತೆ ಅನಿಸುತ್ತಿದ್ದರೂ, ಒಳಗಡೆ ಹೋದೊಡನೆ ಅವರಿಗೆ ತಾನು ಯಾವುದೋ ಒಂದು ಉದ್ಯಾನವನಕ್ಕೆ ಕಾಲಿಟ್ಟಂತಹ ಅನುಭವ! ಆ ಅನುಭವ ರಾಮಯ್ಯ ಆಳ್ವರು ಮತ್ತು ಕುಮುದಳದ್ದು ಮಾತ್ರವಲ್ಲ, ಕೌಶಿಕನ ಅನುಭವವೂ ಆಗಿತ್ತು. ಆತನಿಗೆ ಮೈಯೆಲ್ಲ ಸಂಭ್ರಮವೋ ಸಂಭ್ರಮ !

ಡಾ. ವಾಹೀದ್ ಅವರು ಬಾಲವನದ 'ರೌಂಡ್ಸ್' ಮುಗಿಸಿ ಕಾರಿಡಾರ್‌ಗೆ ಬಂದವರು ನೇರ ಬಂದು ಕೂತಿದ್ದು ಕಾರಿಡಾರ್‌ಗೆ ತಾಗಿಕೊಂಡಿದ್ದ ಒಂದು ಗಾಜಿನ ಕೊಠಡಿಯಲ್ಲಿ. ಹಾಗೆ ಕೂತವರು ಒಂದು ಲೋಟ ನೀರು ಕುಡಿದು, ಮೊದಲು ರಾಮಯ್ಯ ಆಳ್ವರನ್ನು ಕರೆಸಿ, ಗೌರವದ ಕೆಲವು ಮಾತುಗಳನ್ನಾಡಿದ್ದರು. ತದ ನಂತರದಲ್ಲಿ ಅವರ ಮಗಳು, ಅಳಿಯ, ಮೊಮ್ಮಗನ ಬಗ್ಗೆ ಡಾ. ಸ್ವಪ್ನ ಹೆಗ್ಡೆ ಹೇಳಿದ್ದ ವಿಷಯಗಳನ್ನಷ್ಟು ತಿಳಿಸಿ, ನಂತರ ಇನ್ನಷ್ಟು ವಿಷಯಗಳ ಕೆದಕತೊಡಗಿದ್ದರು. 'ನಿಮ್ಮ ಮಗು ಕೌಶಿಕ... ಖಂಡಿತ ವಾರದೊಳಗೆ ಮತ್ತೆ ಸರಿ ಹೋಗ್ತಾನೆ. ಆದ್ರೆ ಅವನನ್ನು ಒತ್ತಡವಿರುವ ಶಾಲಾ ವಾತಾವರಣದಲ್ಲಿ ಬಿಟ್ಟರೆ ಮತ್ತೆ ಆತ ಎಂದಿಗೂ ಸರಿ ಹೋಗಲಾರ...' ಎಂದು ರಾಮಯ್ಯ ಆಳ್ವರ ಮುಖವನ್ನು ದಿಟ್ಟಿಸಿದ್ದರು.

ರಾಮಯ್ಯ ಆಳ್ವರು ಒಂದು ನಿಟ್ಟುಸಿರು ಬಿಟ್ಟು ಅಂದರು: 'ಮಾತಿನ ಸುತ್ತಿಗೆ ನಿಮ್ಮ ಕೈಯಲ್ಲಿದೆ ಡಾಕ್ಟ್ರೇ... ಅಳಿಯ ಅಕ್ಷಯಕುಮಾರನನ್ನು ಮಾತಿನಿಂದ ಬಡಿದು ಸರಿ ಮಾಡಬೇಕಾದವರು ನೀವಲ್ಲದೆ ಬೇರಾರು ಅಲ್ಲ...' ಎಂದವರೇ ಜಿನುಗುತ್ತಿದ್ದ ಕಣ್ಣೀರನ್ನು ಶಲ್ಯದಲ್ಲಿ ಒತ್ತಿಕೊಂಡಿದ್ದರು.

'ಸರಿ ಬಿಡಿ... ಎಲ್ಲ ಸರಿ ಮಾಡೋಣ; ಬೆಂಗಳೂರಿನ ಅಪಾರ್ಟ್‌ಮೆಂಟ್‌ನಲ್ಲಿ ಬೆಳೆಯೋ ಹೆಚ್ಚಿನ ಮಕ್ಕಳಿಗೆ... ಒಮ್ಮೆ ಊರಿನ ಪರಿಸರದ 'ರುಚಿ' ತೋರಿಸಿದ್ರೆ... ಅವುಗಳ ಪಾಡು ಮತ್ತೆ ಬೋನಲ್ಲಿಟ್ಟ ಪ್ರಾಣಿಗಳದ್ದೇ ಸಮ. ಅವು ಬೋನಿನಿಂದ ಹೊರ ಬಂದು ತಮ್ಮ ಸಹಜ ಪರಿಸರಕ್ಕೆ ನುಗ್ಗಲು ಪ್ರಯತ್ನಿಸುತ್ತವೆ. ನಾವು ಬಿಡಲ್ಲ... ಅದೇ ಸ್ಥಿತಿ ನಿಮ್ಮ ಮೊಮ್ಮಗನದ್ದು ಕೂಡಾ...'

ರಾಮಯ್ಯ ಆಳ್ವರು ಮತ್ತೊಂದು ನಿಟ್ಟುಸಿರು ಬಿಟ್ಟಿದ್ದರು. ಡಾ.ಅಬ್ದುಲ್ ವಾಹೀದ್ ಕೂತಿದ್ದ ಗಾಜಿನ ಕೊಠಡಿಗೆ ಕಣ್ಣಳತೆ ದೂರದಲ್ಲಿದ್ದ ಬಾಲವನದ ಮಕ್ಕಳು ಹಾಗೂ ಕಾರಿಡಾರ್‌ನಲ್ಲಿ ನಿಧಾನಕ್ಕೆ ಓಡಾಡುತ್ತಿದ್ದ ಕೌಶಿಕ ಮತ್ತು ಕುಮುದ ಇಬ್ಬರೂ ಕಾಣಿಸುತ್ತಿದ್ದರು. 'ಆ ಹೆಣ್ಮಗಳಿಗೆ (ಕುಮುದಳಿಗೆ) ಸ್ವಲ್ಪ ತನ್ನ ಸ್ವಪ್ನನ ಹೋಲಿಕೆ ಇದೆ' ಎಂದು ಒಂದರೆಗಳಿಗೆ 'ಆ ಲೋಕಕ್ಕೆ' ಹೋದ ವಾಹೀದ್ ಅವರು, ತಟ್ಟನೆ ಈ ಲೋಕಕ್ಕೆ ಬಂದು ಅಕ್ಷಯಕುಮಾರ ಮತ್ತು ಕುಮುದಳನ್ನು ಜತೆಯಾಗಿ ಇಲ್ಲಿಗೆ ಕಳಿಸುವಂತೆ ರಾಮಯ್ಯಾಳ್ವರ ಮೂಲಕವೇ ಕರೆ ಕಳಿಸಿದ್ದರು.

ಅಕ್ಷಯಕುಮಾರ ಮತ್ತು ಕುಮುದ ಜೊತೆಯಾಗಿ ಡಾ. ವಾಹೀದ್ ಅವರ ಮುಂದೆ ಬಂದು ಕೂತಾಗ... ಅಕ್ಷಯಕುಮಾರನನ್ನು ಪರಿಚಯಸಿಕೊಳ್ಳಲು ಮುನ್ನುಡಿಯಾಗಿ ವೈದ್ಯರು ಡಾ. ಸ್ವಪ್ನ ಹೆಗ್ಡೆಯ ಹೆಸರು ಎತ್ತಿದೊಡನೆ ಆತನ ಎದೆಯೊಳಗೆ 'ಆತಂಕ'ವು ಅವಲಕ್ಕಿ ಕುಟ್ಟತೊಡಗಿತ್ತು.

ಡಾ. ವಾಹೀದ್ ಅವರು ಅಕ್ಷಯಕುಮಾರನ ಶಾಲಾ ವಿದ್ಯಾಭ್ಯಾಸದ ಬಗೆ ಒಂದಷ್ಟು ಕೇಳಿದಾಗ, 'ಸ್ವಪ್ನ ನನಗೆ ಕಸಿನ್; ಒಂದೇ ಶಾಲೆಯಲ್ಲಿ ಒಂದೇ ಕ್ಲಾಸಲ್ಲಿ ಕಲಿತವರು' ಎಂದು